ಬೆಂಗಳೂರು ನಗರಕ್ಕೆ ಕಾವೇರಿ ನಾಲ್ಕನೆಯ ಹಂತದಿಂದ ನೀರು ಸರಬರಾಜು

1159. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಬಿಕ್ಕಪೇಟೆ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ನಗರಕ್ಕೆ ಕಾವೇರಿ ನೀರು ಸರಬರಾಜು 4ನೇ ಹಂತದ ಯೋಜನೆಗೆ ಯೋಜನಾ ಆಯೋಗವು ಒಪ್ಪಿಗೆ ನೀಡಿರುವುದು ನಿಜವೇ?

2) ಹಾಗಿದ್ದಲ್ಲಿ ಕೆಲಸವನ್ನು ಯಾವಾಗ ತೆಗೆದುಕೊಳ್ಳಲಾಗುವುದು?

3) ಈ ಯೋಜನೆಯು ಪೂರ್ಣಗೊಂಡಾಗ ನಗರಕ್ಕೆ ಎಷ್ಟು ಹೆಚ್ಚುವರಿ ನೀರು ಬರುವುದು?

4) ಈ ಯೋಜನೆಯು ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

1) ಹೌದು. ಕಾವೇರಿ 4ನೇ ಹಂತದ ಯೋಜನೆಯನ್ನು ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದೆ.

2) ಕಾವೇರಿ 4ನೇ ಹಂತದ ಕೆಲಸವನ್ನು ಎರಡು ಹಂತಗಳಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ. ಇದರ ಮೊದಲ ಹಂತವನ್ನು 1992-93ರಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

3) ಕಾವೇರಿ 4ನೇ ಹಂತದ ಮೊದಲನೆಯ ಹಾಗೂ ಎರಡನೆಯ ಹಂತಗಳು ಪೂರ್ಣಗೊಂಡಾಗ ನಗರಕ್ಕೆ ಒಟ್ಟು ದಿನಂಪ್ರತಿ 540 ದಶಲಕ್ಷ ಲೀಟರ್ ಹೆಚ್ಚುವರಿ ನೀರು ಬರುವುದು.

4) ಕಾವೇರಿ 4ನೇ ಹಂತದ ಮೊದಲ ಹಂತವನ್ನು 1997-98ರಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಮಾನ್ಯ ಅಧ್ಯಕ್ಷರೇ, ನನ್ನ ಮೊದಲನೆಯ ಪ್ರಶ್ನೆಗೆ ಕಾವೇರಿ ನಾಲ್ಕನೇ ಹಂತದ ಯೋಜನೆಯನ್ನು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇಲ್ಲಿ ಸೇರಿಸಲಾಗಿದೆ ಎಂದಿದ್ದಾರೆಯೇ ಹೊರತು ಎಷ್ಟು ಕೋಟಿ ರೂಪಾಯಿ ವೆಚ್ಚ ಆಗುತ್ತದೆ. ಎಷ್ಟು ಕೋಟಿ ರೂಪಾಯಿಗಳ ಎಸ್ಟಿಮೇಟ್ ಮಾಡಿದ್ದಾರೆ ಎಂದು ಹೇಳಿಲ್ಲ. ಮತ್ತು ನನ್ನ ಎರಡನೆಯ ಪ್ರಶ್ನೆಗೆ 'ಎರಡು ಹಂತದಲ್ಲಿ ತೆಗೆದುಕೊಳ್ಳುವುದಕ್ಕೆ ಉದ್ದೇಶಿಸಲಾಗಿದೆ' ಎಂದಿದ್ದಾರೆ. ಹಾಗೂ 1992-93ರಲ್ಲಿ ಮೊದಲ ಹಂತವನ್ನು ತೆಗೆದುಕೊಳ್ಳುತ್ತೇವೆ ಎಂದಿದ್ದಾರೆ. ಈಗಾಗಲೇ 1992-93ರ ಬಜೆಟ್ ಮಂಡನೆ ಆಗಿದೆ. ಇವರು ಹೆಚ್.ಯುಡಿ ಇಲಾಖೆಯ ವತಿಯಿಂದ ಕಾವೇರಿ 4ನೇ ಹಂತದ ಯೋಜನೆಗೆ ಎಷ್ಟು ಕೋಟಿ ರೂಪಾಯಿಗಳನ್ನು ಮಿಸಲಿಟ್ಟಿದ್ದಾರೆಂದು ತಿಳಿಸಬೇಕು. ಅಷ್ಟು ಹಣವನ್ನು ಅವರು ಮಿಸಲು ಇಟ್ಟಿದ್ದಾರೆಯೇ ಅಥವಾ ಸುಮ್ಮನೆ ಸಮಾಧಾನಕ್ಕೋಸ್ಕರವಾಗಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆಯೇ? ಕಾವೇರಿ 3ನೇ ಹಂತದ ಕೆಲಸ ಮುಗಿಯಬೇಕಾದರೆ, ಬಿಡಿಎ, ಕಾರ್ಪೋರೇಷನ್, ಎಲ್ಐಸಿ, ಪಬ್ಲಿಕ್ ಸೆಕ್ಟಾರ್‌ನಲ್ಲಿ ಹಣ ವಸೂಲಿ ಮಾಡಿ ಅವರಿಗೆ ಸಪ್ಲೈ ಮಾಡಿದರು. ಆದರೆ ಈ 4ನೇ ಹಂತಕ್ಕೂ ಕೂಡ ಅದೇ ರೀತಿ ಏನಾದರೂ ಪ್ರಾವಿಷನ್ ಮಾಡಿ ಅವರ ಪತ್ರವ್ಯವಹಾರಗಳನ್ನು ಮಾಡಿದ್ದೀರಾ? ಇಲಾಖಾಧಿಕಾರಿಗಳು ಬೆಂಗಳೂರು

ನಗರದಲ್ಲಿ ನೀರಿಗೆ ಏನು ಅಭಾವ ಇದೆ ಅದರಲ್ಲಿ ನಾಕಷ್ಟು ಕಳಕಳಿಯಿಂದ ನಿಗಾ ಇಟ್ಟು ಕೆಲಸ ಮಾಡುತ್ತಿದ್ದಾರೆಯೇ? ಇನ್ನು 3ನೇ ಪ್ರಶ್ನೆಗೆ 540 ಲಕ್ಷ ದಶಲೀಟರ್ ನೀರು ಬರುವುದು ಎಂದು ಹೇಳಿದ್ದೀರಿ. ಇಷ್ಟು ನೀರು ಸರಬರಾಜಾಗಲು ಕಾವೇರಿಯಿಂದ 40-50 ಟಿಎಂಸಿ ಅಡಿ ನೀರು ಬರಬೇಕಾಗುತ್ತದೆ. ಕಾವೇರಿ ನೀರಿನ ವಿಷಯ ಟ್ರಿಬ್ಯುನಲ್ ಮುಂದೆ ಇದೆ. ಆದ್ದರಿಂದ ನಮ್ಮ ಹೆಚ್‌ಯುಡಿ ಇಲಾಖೆಯವರು ಏನಾದರೂ 4ನೇ ಹಂತಕ್ಕೆ ಎಷ್ಟು ನೀರು ಬೇಕಾಗುತ್ತದೆ ಆ ಬಗ್ಗೆ ಲಾಯರ್ಸ್ ಮುಖಾಂತರ ಟ್ರಿಬ್ಯೂನಲ್ ಮುಂದೆ ಅಪ್ಲಿಕೇಷನ್ ಹಾಕಿಸಿದ್ದಾರೆಯೇ ಏಕೆಂದರೆ 50 ಟಿಎಂಸಿ ಅಡಿ ನೀರು ಕುಡಿಯುವ ನೀರಿನ ಸಲುವಾಗಿ ಬೇಕಾದಾಗ ತಾವು ಟ್ರಿಬ್ಯುನಲ್ ಮುಂದೆ ಆ ಬಗ್ಗೆ ಅರ್ಜಿಯನ್ನು ಹಾಕಲೇಬೇಕಾಗುತ್ತದೆ. ಅಪ್ಲಿಕೇಶನ್ ಹಾಕಲಿಲ್ಲವೆಂದರೆ ನಾಳೆ ದಿವಸ ನೀರು ಡ್ರಾ ಮಾಡುವುದಕ್ಕಾಗುವುದಿಲ್ಲ. ಬೆಂಗಳೂರು ಮಹಾನಗರಕ್ಕೆ ಬಹಳಷ್ಟು ತೊಂದರೆಯಾಗುತ್ತದೆ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ನನ್ನ ನಾಲ್ಕನೆಯ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. 1997-98ರಲ್ಲಿ ನಾಲ್ಕನೆಯ ಹಂತದಲ್ಲಿ ಮೊದಲಿಯ ಹಂತವನ್ನು ಮುಗಿಸುತ್ತೇವೆಂದರೆ. ಮೊದಲನೆಯ ಹಂತವನ್ನು ಮುಗಿಸಬೇಕಾದರೆ ಐದು ವರ್ಷ ಬೇಕು. ಎರಡನೆಯ ಹಂತ ಮುಗಿಸಬೇಕಾದರೆ ಫರ್ದರ್ 5 ವರ್ಷ ಬೇಕಾಗುತ್ತದೆ. ಅಲ್ಲಿಗೆ 10 ವರ್ಷಕ್ಕೆ ಮುಗಿಸುತ್ತಾರೆ. 10 ವರ್ಷಕ್ಕೆ ಬೆಂಗಳೂರಿನ ಜನಸಂಖ್ಯೆ. ಇವತ್ತು ಬೆಂಗಳೂರಿನ ಜನಸಂಖ್ಯೆ 50 ಲಕ್ಷ ಇದೆ. ಇನ್ನು ಹತ್ತು ವರ್ಷಕ್ಕೆ 1 ಕೋಟಿ ಜನಸಂಖ್ಯೆಯಾಗುತ್ತದೆ. 1 ಕೋಟಿ ಜನಸಂಖ್ಯೆಗೆ ಎಷ್ಟು ಮಿಲಿಯನ್ ಲೀಟರ್ಸ್ ನೀರು ಬೇಕು? ಪರ್ ಕ್ಯಾಪಿಟಾ ಕನ್‌ಸಮ್‌ಷನ್ ಎಷ್ಟು ಬೇಕು? ತಮಗೆಲ್ಲರಿಗೂ ಗೊತ್ತಿರುವ ಹಾಗೆ. ಇಲ್ಲಿ ಕುಳಿತಿರುವವರೆಲ್ಲರೂ ಬೆಂಗಳೂರು ನಗರದಲ್ಲಿರುವವರೇ. 50-60 ಲೀಟರ್ ಪರ್ ಕ್ಯಾಪಿಟಾ ಕನ್‌ಸಮ್‌ಷನ್ ನೀರು ಯೂಸ್ ಮಾಡುತ್ತಿದ್ದೇವೆ. ಆ ಪರಿಸ್ಥಿತಿ ಇರುವಾಗ. ನ್ಯಾಷನಲ್ ಆವರೇಜ್ 150 ರಿಂದ 200 ಲೀಟರ್ ಇದೆ. ಈಗಿರುವ ಎಕ್ಸಿಸ್ಟಿಂಗ್ ಪೈಪ್‌ನಲ್ಲಿ ಎರಡು ಗಂಟೆ ನೀರು ಕೊಡುತ್ತಿಲ್ಲ. 10 ವರ್ಷ ಆದಮೇಲೆ ನಮ್ಮ ಡಿಮ್ಯಾಂಡ್ ಎಷ್ಟಾಗುತ್ತದೆ?

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಅಧ್ಯಕ್ಷರೇ. ಈಗಾಗಲೇ ಕಾವೇರಿ ಥರ್ಡ್‌ಸ್ಟೇಜ್ ಮುಗಿದಿದೆ. ಈ ವರ್ಷದ ಜೂನ್ ತಿಂಗಳಿನಲ್ಲಿ ಕಾವೇರಿ ಥರ್ಡ್‌ಸ್ಟೇಜ್‌ನಿಂದ 270 ದಶಲಕ್ಷ ಲೀಟರ್ ನೀರು ಬರುವಂತಹ ವ್ಯವಸ್ಥೆಯನ್ನು ಮಾಡಿಕೊಂಡಿದ್ದೇವೆ. ನಾಲ್ಕನೆಯ ಸ್ಟೇಜ್ ಎಂಟನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದೆ. ಅದು ಕೇಂದ್ರ ಸರ್ಕಾರದಿಂದ ಅಪ್ರೂವ್ ಆಗಿದೆ. ಅಪ್ರೂವಲ್ ಆದಮೇಲೆ ಪೆಂಡಿಂಗ್ ಪ್ಯಾಟ್ರನ್ ಯಾವ ಟೈಪ್‌ನಲ್ಲಿ ಮಾಡಬೇಕು ಎನ್ನುವ ಬಗ್ಗೆ ಡಿಸ್‌ಕಷನ್ ಮಾಡಿ ಫೈನಲ್ ಡಿಸೀಸನ್ ಮಾಡಬೇಕಾಗುತ್ತದೆ. ಒಂದನೆಯ ಸ್ಟೇಜ್‌ಗೆ ಎಷ್ಟು ದುಡ್ಡು ಬೇಕೆಂದು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿರಲಿಲ್ಲ. 4ನೇ ಸ್ಟೇಜ್‌ಗೆ ಸುಮಾರು 1 ಸಾವಿರ ಕೋಟಿ ರೂಪಾಯಿ ಬೇಕಾಗುತ್ತದೆ. ನಾಲ್ಕನೆಯ ಸ್ಟೇಜ್‌ನಲ್ಲಿ ಎರಡನೆಯ ಹಂತದ ಕೆಲಸವನ್ನು ಮಾಡುವ ವ್ಯವಸ್ಥೆ ಮಾಡಿದ್ದೇವೆ. 490 ಕೋಟಿ ಇನ್ನೊಂದು ಸುಮಾರು 510 ಕೋಟಿ ಈ ರೀತಿಯಲ್ಲಿ ನಾವು ತೆಗೆದುಕೊಂಡಿದ್ದೇವೆ. ಪ್ರತಿ ಹಂತಕ್ಕೂ ಸುಮಾರು 270 ದಶಲಕ್ಷ ಲೀಟರ್ ನೀರು ಬರುವ ವ್ಯವಸ್ಥೆಯನ್ನು ಮಾಡಿಕೊಂಡಿದ್ದೇವೆ. ನಮಗೆ ಬೇಕಾದ ನೀರನ್ನು ಉಪಯೋಗಿಸಿಕೊಳ್ಳಲಿಕ್ಕೆ ನಾವು ಕೇಂದ್ರಸರ್ಕಾರಕ್ಕೆ ಹೋಗಬೇಕಾಗಿಲ್ಲ. ಕುಡಿಯುವ ನೀರು ತೆಗೆದುಕೊಳ್ಳುವುದಕ್ಕೆ ನಮ್ಮ ಲೋಕೋಪಯೋಗಿ ಇಲಾಖೆಯವರ ಪರ್ಮಿಷನ್ ತೆಗೆದುಕೊಂಡಿದ್ದೇವೆ. ನಮ್ಮ ಕರ್ನಾಟಕದ ಷೇರ್‌ನಲ್ಲಿಯೇ ನೀರು ತೆಗೆದುಕೊಂಡು ಸಮಾಧಾನಕರವಾದ ರೀತಿಯಲ್ಲಿ ನೀರನ್ನು ಒದಗಿಸಿ ಕೊಡುತ್ತೇವೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಮಂತ್ರಿಗಳು ಉತ್ತರ ಕೊಡಲಿಲ್ಲ. ಲೋಕೋಪಯೋಗಿ ಇಲಾಖೆಯ ಜೊತೆ ಕರೆಸ್ಪಾಂಡೆನ್ಸ್ ಮಾಡಿ ವಾಟರ್ ತೆಗೆದುಕೊಳ್ಳುತ್ತೇವೆಂದು ಮಂತ್ರಿಗಳು ಹೇಳಿದ್ದಾರೆ. ನಾಳೆ ಕೆಆರ್ ಎಸ್ ನಿಂದ ವಾಟರ್ ರಿಲೀಸ್ ಮಾಡುವುದಿಲ್ಲ, ತಮಿಳುನಾಡಿನವರು ಎಲ್ಲಾ ನೀರನ್ನು ಹೊತ್ತುಕೊಂಡು ಹೋಗುತ್ತಾರೆ. ಆಗ ಬೆಂಗಳೂರು ಮಹಾನಗರಕ್ಕೆ ಎಲ್ಲಿಂದ ನೀರನ್ನು ಡ್ರಾ ಮಾಡುತ್ತೀರಿ? ಈ ದಿಸೆಯಲ್ಲಿ ಕೆಲವು ಕ್ಲೈಮ್ಸ್ ಏನಾದರೂ ಕಾವೇರಿ ವಾಟರ್ ಟ್ರಿಬ್ಯುನಲ್‌ಗೆ ಹಾಕಿದ್ದೀರಾ? ಬೆಂಗಳೂರು ಮಹಾನಗರಕ್ಕೆ ಕುಡಿಯುವ ನೀರಿಗಾಗಿ ಇಷ್ಟು ನೀರು ಕೊಡಿಯೆಂದು ಕ್ಲೈಮ್ ಹಾಕದಿದ್ದರೆ, ನೀವು ಹೋಗಿ ಅಲ್ಲಿ ನೀರು ಡ್ರಾ ಮಾಡುವುದಕ್ಕೆ ಹೋದರೆ ನಾಳೆ ಅಲ್ಲಿ ರೈತರು ಬೊಂಬಡಾ ಹೊಡೆಯುತ್ತಾರೆ. ನಾನು ಈ ಪ್ರಶ್ನೆಯನ್ನು ಕೇಳಿದ್ದಕ್ಕೆ ಮಂತ್ರಿಗಳು ಉತ್ತರ ಹೇಳಲಿಲ್ಲ.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಅಧ್ಯಕ್ಷರೆ, ಕಾವೇರಿಯಿಂದ ಕುಡಿಯುವ ನೀರು ಡ್ರಾ ಮಾಡುವುದಕ್ಕೆ ಯಾವುದೇ ಇಂಟರ್‌ಸ್ಟೇಟ್ ಡಿಸ್‌ಪ್ಯೂಟ್ ಅಡ್ಡ ಬರುವುದಿಲ್ಲ. ನಾನು ಏನು ಹೇಳಿದ್ದೇನೆಂದರೆ ನಮ್ಮ ಇರಿಗೇಷನ್ ಡಿಪಾರ್ಟ್‌ಮೆಂಟ್‌ನಿಂದ ನಾವು ಪರ್ಮಿಶನ್ ಕೆಗೆದುಕೊಳ್ಳಬೇಕಾಗಿದೆ. ಈಗಾಗಲೇ ಪರ್ಮಿಷನ್ ತೆಗೆದುಕೊಂಡಿದ್ದೇವೆ. ನೀರು ಡ್ರಾ ಮಾಡುವ ವಿಚಾರದಲ್ಲಿ ಯಾವುದೇ ತೊಂದರೆಯಿಲ್ಲ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಯಾವುದೇ ಆತಂಕವನ್ನು ವ್ಯಕ್ತಪಡಿಸುವ ಅವಶ್ಯಕತೆಯಿಲ್ಲ. ಇದು ಪಂಚವಾರ್ಷಿಕ ಯೋಜನೆಯಲ್ಲಿ ಅಪ್ರೂವಲ್ ಆಗಿ ಬಂದಿದೆ. ಪೆಂಡಿಂಗ್ ಪ್ಯಾಟ್ರನ್ ಯಾವ ರೀತಿ ಮಾಡಬೇಕು ನಮ್ಮ ಬಜೆಟ್‌ನಲ್ಲಿ ಎಷ್ಟು ಹಣ ಇಡಬೇಕು ಈ ವಿಚಾರವನ್ನು ಈಗಾಗಲೇ ನಾವು ಅದನ್ನು ವರ್ಕ್ ಔಟ್ ಮಾಡುತ್ತಿದ್ದೇವೆ. ಹುಡ್ಕೋದಿಂದ ಹಣ ತೆಗೆದುಕೊಳ್ಳಬೇಕೇ ಅಥವಾ ಎಲ್‌ಐಸಿ ಯಿಂದ ತೆಗೆದುಕೊಳ್ಳಬೇಕೇ ಅಥವಾ ವರ್ಲ್ಡ್ ಬ್ಯಾಂಕಿನಿಂದ ತೆಗೆದುಕೊಳ್ಳಬೇಕೇ ಎನ್ನುವ ವಿಚಾರದಲ್ಲಿ ನಾವು ಈಗಾಗಲೇ ಪರಿಶೀಲನೆ ಮಾಡುತ್ತಿದ್ದೇವೆ. ನನಗನಿಸುತ್ತಿದೆ ಎಲ್‌ಐಸಿ ಮತ್ತು ಹುಡ್ಕೋದಿಂದ ಬೆಂಗಳೂರು ವಾಟರ್ ಸಪ್ಲೈ ಸ್ಕೀಮ್‌ಗೆ ಹಣ ಕೊಡುವುದಕ್ಕೆ ಅವರು ಈಗಾಗಲೇ ಮುಂದೆ ಬಂದಿದ್ದಾರೆ. ಬಹುಶಃ ಅದನ್ನು ತೆಗೆದುಕೊಂಡರೆ ಅದಷ್ಟು ಬೇಗ ಆಗಬಹುದು. ವರ್ಲ್ಡ್ ಬ್ಯಾಂಕಿನದು ಆದರೆ ಅವರ ರಿಕ್ವೈರ್‌ಮೆಂಟ್‌ಗಳನ್ನು ಫುಲ್‌ಫಿಲ್ ಮಾಡುವುದಕ್ಕೆ ಸಮಯವಾಗುತ್ತದೆ. ಆದರೂ ಸಹ ವರ್ಲ್ಡ್ ಬ್ಯಾಂಕಿನ ವಿಚಾರದಲ್ಲಿ ನಾವು ಪರಿಶೀಲನೆ ಮಾಡುತ್ತೇವೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕಾವೇರಿ ಮೂರನೆಯ ಹಂತ

1728. ಶ್ರೀ ಎಂ. ಮುನಿಸ್ವಾಮಿ (ಶಾಂತಿನಗರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ನೀರಿನ 3ನೇ ಹಂತದ ಕಾರ್ಯ ಯಾವಾಗ ಪ್ರಾರಂಭವಾಯಿತು?

ಆ) ಈ ಯೋಜನೆಯ ಒಟ್ಟು ವೆಚ್ಚವೆಷ್ಟು?

ಇ) 3ನೇ ಹಂತದ ಈ ಕಾರ್ಯವು ಯಾವಾಗ ಪೂರ್ಣಗೊಳ್ಳುವುದು?

ಈ) ಈ ಯೋಜನೆ ಪೂರ್ಣಗೊಂಡಾಗ ಬೆಂಗಳೂರು ನಗರಕ್ಕೆ ಎಷ್ಟು ಹೆಚ್ಚುವರಿ ನೀರು ದೊರೆಯುತ್ತದೆ?